ಓ.ಎಸ್. ನಂ.70 /2019
ಡಿ ಡಬ್ಲ್ಯೂ -3

<u>ಸಾಕ್ಷಿಯನ್ನು ದಿನಾಂಕಃ-09.02.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀಸವಾಲುಃ ಶ್ರೀ ಎನ್ ಸಿ ಸಿ 3 ನೇ ಪ್ರತಿವಾದಿ ಪರ ವಕೀಲರಿಂದ</u>

ನಾನು ಪ್ರೊಪೆಷನಲ್ ಕೊರಿಯರ್ ನಲ್ಲಿ ಮ್ಯಾನೇಜರ್ ಆಗಿ ಮತ್ತು ಡೆಲಿವರಿ ಬಾಯ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಆ ರೀತಿ ನಾನು ಮ್ಯಾನೇಜರ್ ಆಗಿ ಮತ್ತು ಡೆಲಿವರಿ ಬಾಯ್ ಆಗಿ ಕೆಲಸ ಮಾಡುವುದಕ್ಕೆ ನನ್ನ ಬಳಿ ದಾಖಲೆ ಇರುತ್ತದೆ. ಪ್ರೊಫೆಷನಲ್ ಕೊರಿಯರ್ ರವರಿಗೂ ವುತ್ತು ನನಗೂ ಯಾವುದೇ ಸಂಬಧ ಇಲ್ಲ ಎಂದರೆ ಸರಿಯಲ್ಲ. ನಾನು ಮ್ಯಾನೇಜರ್ ಆಗಿ ಮತ್ತು ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪ್ರೊಪೆಷನಲ್ ಕೊರಿಯರ್ ರವರ ಪರವಾಗಿ ಪ್ರತಿನಿಧಿಸಲು ಮತ್ತು ಸಾಕ್ಷಿ ನುಡಿಯಲು ನನ್ನ ಬಳಿ ದಾಖಲೆ ಇದೆ. ಆ ರೀತಿ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಾನು ಸುಮಾರು 2000 ಸಾಲಿನಿಂದ ಪ್ರೊಪೆಷನಲ್ ಕೊರಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ಆದ ಕಾರಣ ಸೋಮವಾರಪೇಟೆಯಲ್ಲಿರುವ ಎಲ್ಲಾ ಬ್ಯಾಂಕ್ ಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ವಿಜಯ ಬ್ಯಾಂಕ್ ಅಬ್ಬೂರ್ ಕಟ್ಟೆ ಶಾಖೆಗೂ ಮತ್ತು ನಮ್ಮ ಪ್ರೊಫೆಷನಲ್ ಕೊರಿಯರ್ ಕಚೇರಿಗೆ ಸುಮಾರು 7 ರಿಂದ 8 ಕಿ ಮಿ ಅಂತರ ಇರುತ್ತದೆ. ನಿಡಿ-2 ಮತ್ತು 8 ದಾಖಲೆಗಳು ನಮ್ಮ ಪ್ರೂಫ್ ಆಫ್ ಡೆಲಿವರಿಯ ರಶೀದಿಗಳು ಎಂದರೆ ಸರಿ. ನಿಡಿ-2 ಮತ್ತು 8 ದಾಖಲೆಗಳು ವಿಜಯಬ್ಯಾಂಕ್ ನ ಅಬ್ಬೂರ್ ಕಟ್ಟೆ ಶಾಖೆಯವರು ನನಗೆ ಕೊಟ್ಟಿರುತ್ತಾರೆ.

2. ನಿಡಿ -2 ಮತ್ತು 8 ರಲ್ಲಿರುವ ಆರ್ಟಿಕಲ್ ಒಳಗಡೆ ಏನು ಇರುತ್ತದೆ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಮ್ಮ ಕಚೇರಿಯ ಶಾಖೆಯಿಂದ 3 ನೇ ಪ್ರತಿವಾದಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಷ್ಟು ಅಂತರ ಇರುತ್ತದೆ ಎಂದರೆ ಸಾಕ್ಷಿಯು 100 ಮೀಟರ್ ಇರುತ್ತದೆ ಎಂದು ನುಡಿಯುತ್ತಾರೆ. ವಿಜಯ ಬ್ಯಾಂಕ್ ಅಬ್ಬೂರ್ ಕಟ್ಟೆ ಶಾಖೆಯಿಂದ ನಮ್ಮ ಕಚೇರಿಗೆ ಬರಬೇಕಾದರೆ 3 ನೇ ಪ್ರತಿವಾದಿಯ ಬ್ಯಾಂಕಿನ ಶಾಖೆಯನ್ನು ದಾಟಿಕೊಂಡು ಬರಬೇಕಾಗುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 20222-23 ನೇ ಸಾಲಿನವರೆಗೆ ಈಗ ಗ್ರಾಮೀಣ ಬ್ಯಾಂಕ್ ಇರುವಂತಹ ಕಟ್ಟಡದಲ್ಲಿ ಇತ್ತು ಎಂದರೆ ಸರಿ. ಆಗ ನಮ್ಮ ಕಚೇರಿಯಿಂದ ಮೊದಲು ಇದ್ದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗೆ ಮಧ್ಯದಲ್ಲಿ 5 ರಿಂದ 6 ಅಂಗಡಿ ಇತ್ತು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬೇರೆಯಾಗಿರುತ್ತದೆ. ಮತ್ತು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕೂಡ ಬೇರೆ ಆಗಿರುತತದೆ ಎಂದರೆ ಸರಿ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತ್ಯಾಗರಾಜ್ ರೋಡ್ ನಲ್ಲಿ ಇತ್ತು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮುಖ್ಯ ರಸ್ತೆಯಲ್ಲಿ ಇತ್ತು ಎಂದರೆ ಸರಿ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ಸ್ಟೇಟ್ ಬ್ಯಾಂಕ್ ಆಫ್

ಇಂಡಿಯಾ ಎಂದು ಹೆಸರು ಬದಲಾಯಿಸಿದ ಮೇಲೂ ಸಹ ಮುಖ್ಯ ರಸ್ತೆಯಲ್ಲೇ ಇತ್ತು ಎಂದರೆ ಸರಿ.

3. 2019 ನೇ ಸಾಲಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎರಡು ಶಾಖೆಗಳು ಇರುತ್ತದೆ ಎಂದರೆ ಸರಿ. ನಿಡಿ-16(ಎ) ಪ್ರಕಾರ ನಾನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮುಖ್ಯ ರಸ್ತೆ ಶಾಖೆಯಲ್ಲಿ ನೀಡಲಾಗಿರುತ್ತದೆ ಎಂದರೆ ಸರಿ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮುಖ್ಯ ರಸ್ತೆಯಲ್ಲಿರುವಂತಹ ಶಾಖೆಗೂ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತ್ಯಾಗರಾಜ ರಸ್ತೆಯಲ್ಲಿರುವಂತಹ ಶಾಖೆಗೆ ಯಾವುದೇ ಆಂತರಿಕ ವ್ಯವಹಾರ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುುತ್ತಾರೆ. ವಾದಿಯವರು ಈ ಪ್ರಕರಣವನ್ನು ನಮ್ಮ ಮೇಲೆ ಹಾಕಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಆದ ಕಾರಣ ವಾದಿಯು ಯಾರ ವಿರುದ್ಧ ಯಾವ ಕಾರಣಕ್ಕಾಗಿ ದಾವೆ ಹೂಡಿರುತ್ತಾರೆ ಎಂಬುದರ ಬಗ್ಗೆ ವಿಜಯ ಬ್ಯಾಂಕ್ ಮ್ಯಾನೇಜರ್ ನನಗೆ ಹೇಳಿರುತ್ತಾರೆ. ನಿಡಿ 16(ಎ) ನಿಡಿ 2 ಕ್ಕೆ ಸಂಬಂಧ ಪಟ್ಟಿರುತ್ತದೆ ಎಂದರೆ ಸರಿ. ನಿಡಿ 2 ನಮ್ಮ ಕಚೇರಿಯಲ್ಲಿ ತಯಾರಾಗಿರುತ್ತದೆ ಯಾರು ತಯಾರು ಮಾಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿರುವುದಿಲ್ಲ. ನಿಡಿ 2 ಆರ್ಟಿಕಲ್ ಎಸ್ ಬಿ ಐ ಗೆ ಬುಕ್ ಆಗಿರುತ್ತದೆ ಆದರೆ ನಿಡಿ 16(ಎ) ಎಸ್ ಬಿ ಎಮ್ ಗೆ ಡೆಲಿವರಿ ಆಗಿರುತ್ತದೆ ಎಂದರೆ ಸರಿ. ನಾವು ಆರ್ಟಿಕಲ್ ಬುಕ್ ಮಾಡಿರುವಂತಹ ವಿಳಾಸದಾರರಿಗೆ ಕೊಡದೆ ಬೇರೆ ಯಾರಿಗೂ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ಮಾಡಿರುವಂತಹ ತಪ್ಪಿನಿಂದ ಈ ಪ್ರಕರಣ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ.ಸರಿ ಇದೆ.

ಸಹಿ/-
ಸಿ.ಜೆ ಮತ್ತು ಜೆಎಂ.ಎಫ್ ಸಿ
ಸೋಮವಾರಪೇಟೆ